C.C–657/2018

ಪಿ. ಡಬ್ಲೂ – 1

ಸಾಕ್ಷಿಯನ್ನು ದಿಃ 17.06.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ. ಕೆ.ಎಂ ರವರಿಂದಃ**

**1.** ನಾವು ಮೂಲತಃ ಹೊನ್ನಾವರದವರು. ನನ್ನ ತಂದೆ ಹೊನ್ನಾವರದಿಂದ ಸಾಗರಕ್ಕೆ ಬಂದು ನೆಲೆಸಿದ್ದಾರೆ. ನಾನು ಸಾಗರದಲ್ಲಿಯೇ ಹುಟ್ಟಿ ನೆಲೆಸಿದ್ದೇನೆ. 2004 ರಿಂದ 2007 ರವರೆಗೆ ವಿದಾಭ್ಯಾಸಕ್ಕಾಗಿ ಬೆಂಗಳೂರಿನಲ್ಲಿ ವಾಸವಾಗಿದ್ದೆ. ನಾನು ಬಿ.ಎ ಜರ್ನಲಿಸಮ್ ಪದವಿಧರ. ನಾನು ವಿದ್ಯಾಭ್ಯಾಸ ಮುಗಿದ ನಂತರ ಒರಿಜೆನ್ ಮೊಬೈಲ್ ನ ವಿತರಕರಾಗಿ ವ್ಯವಹಾರ ಪ್ರಾರಂಭ ಮಾಡಿದ್ದೆ. ಸದರಿ ವ್ಯವಹಾರವನ್ನು 2010 ರವರೆಗೆ ಮಾಡಿದ್ದು, ನಂತರ ಕಟ್ಟಡ ನಿರ್ಮಾಣ ಮಾಡುವ ಕೆಲಸವನ್ನು ಗುತ್ತಿಗೆ ಆಧಾರದ ಮೇಲೆ ಮಾಡುತ್ತಿದ್ದೆ. ಇದರೊಂದಿಗೆ ನಾನು ಕೃಷಿಯನ್ನು ಸಹ ಮಾಡುತ್ತಿದ್ದೇನೆ. ಸೊರಬ ತಾಲ್ಲೂಕು, ಉಳವಿ ಹೋಬಳಿಯ ಕುಪ್ಪೆ ಗ್ರಾಮದಲ್ಲಿ ಶುಂಠಿ ಬೆಳೆಯುವ ಒಂದುವರೆ ಎಕರೆ ಜಮೀನು ನಮಗೆ ಇತ್ತು. ಹೊಸಗುಂದ ಗ್ರಾಮದಲ್ಲಿ 6 ಎಕರೆ ತರಿ ಹಾಗೂ 3 ಎಕರೆ ಭಾಗಾಯ್ತು ಜಮೀನು ಇತ್ತು. ಮೇಲಿನ ಎರಡು ಜಮೀನುಗಳ ಪೈಕಿ ಕುಪ್ಪೆ ಗ್ರಾಮದ ಜಮೀನನ್ನು 2017 ಅಕ್ಟೋಬರ್ ನಲ್ಲಿ ಹಾಗೂ ಹೊಸಗುಂದದ ಜಮೀನನ್ನು ಅಜಮಾಸು 2022 ರಲ್ಲಿ ಮಾರಾಟ ಮಾಡಿದ್ದೇವೆ.

**2.** 2017 ರಲ್ಲಿ ನಮ್ಮ ಕುಟುಂಬದಲ್ಲಿ ನನ್ನ ತಂದೆ ತಾಯಿ, ಇಬ್ಬರು ಅಣ್ಣಂದಿರು, ನನ್ನ ಅತ್ತಿಗೆಯಂದಿರು ಸೇರಿ ನಾವು ಒಟ್ಟು 6 ಜನ ಇದ್ದೆವು. ನನ್ನ ಹಿರಿಯ ಅಣ್ಣ ಸಾಫ್ಟ್ ಇಂಜೇನಿಯರ್ ಆಗಿ ವಿದೇಶದಲ್ಲಿ ಇದ್ದಾನೆ. ನನ್ನ ಮತ್ತೊಬ್ಬ ಅಣ್ಣ ಶಾಮಿಯಾನ ವ್ಯವಹಾರವನ್ನು ಮಾಡುತ್ತಿದ್ದಾನೆ. 2017 ರಲ್ಲಿ ನಮ್ಮ ಕುಟುಂಬದಲ್ಲಿ ಯಾರು ಸರ್ಕಾರಿ ನೌಕರರು ಇರಲಿಲ್ಲ. 2017 ರಲ್ಲಿ ನನಗೆ ವ್ಯವಹಾರದಿಂದ ಬಂದಂತಹ ಆದಾಯವನ್ನು ಆದಾಯ ತೆರಿಗೆ ದಾಖಲೆಗಳಲ್ಲಿ ಕಾಣಿಸಿದ್ದೇನೆ. ಮುಂದುವರೆದು ಕೃಷಿ ಆದಾಯವನ್ನು ಆದಾಯ ತೆರಿಗೆ ದಾಖಲೆಗಳಲ್ಲಿ ಕಾಣಿಸಿಲ್ಲ.

**3.** ಹೊಸಗುಂದ ಗ್ರಾಮದ 9 ಎಕರೆ ಜಮೀನನ್ನು ಆನಂದಪುರದ ವೆಂಕಟೇಶ್ ಮತ್ತು ಅವನ ಕುಟುಂಬದವರಿಂದ 2018 ರಲ್ಲಿ ಖರೀದಿ ಮಾಡಿದ್ದೆವು. ಆ ಜಮೀನಿನ ಖರೀದಿಗೆ ನಮ್ಮ ಕುಟುಂಬದ ಒಟ್ಟು ಆದಾಯವನ್ನು ವಿನಿಯೋಗಿಸಿ ಖರೀದಿ ಮಾಡಿದ್ದೇನೆ. ನಾನು ಒಬ್ಬನೇ ಆ ಜಮೀನಿಗೆ ಹಣವನ್ನು ಪಾವತಿಸಲು ನನ್ನ ಬಳಿ ಅಷ್ಟು ಹಣ ಇತ್ತು. ಕುಟುಂಬದವರ ಹಣದಿಂದ ಜಮೀನನ್ನು ಖರೀದಿ ಮಾಡಿರುವುದಾಗಿ ಸದರಿ 9 ಎಕರೆ ಜಮೀನಿನ ಕ್ರಯ ಪತ್ರದಲ್ಲಿ ನಮೂದು ಇಲ್ಲ ಎಂದರೆ ಸರಿ.

**4.** 2024 ರಲ್ಲಿ ನನ್ನ ಮದುವೆಯಾಗಿದೆ. ನನ್ನ ಹೆಂಡತಿಯ ತಂದೆಯ ಹೆಸರು ಉಮೇಶ್ ಎಂದರೆ ಸರಿಯಲ್ಲ. ಮುಂದುವರೆದು ನಾರಾಯಣ ಎನ್ನುತ್ತಾರೆ. ನನ್ನ ಹೆಂಡತಿಯ ತವರು ಮನೆ ಶಿರಸಿ ತಾಲ್ಲೂಕಿನ ಸೋಂದಾ. ಈ ಕೇಸನ್ನು ಹಾಕಲು ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿದ್ದೇನೆ. ನನ್ನ ದೂರಿನ 2 ನೇ ಕಂಡಿಕೆಯಲ್ಲಿ ಕಾಣಿಸಿದ ಸುರೇಶ್ ಎಸ್ ಇವರು ಉಲ್ಲಾಸ್ ಎನ್ನುವ ಡಾಕ್ಟರ್ ನ ಸ್ನೇಹಿತ. ಆರೋಪಿತನು ನನಗೆ  ಸುರೇಶನಿಂದ ಪರಿಚಯವಾಗಿದ್ದಾನೆ. ಆರೋಪಿತನ ತಂದೆಯ ಹೆಸರು ನನಗೆ ಗೊತ್ತಿಲ್ಲದ ಕಾರಣ ದೂರಿನಲ್ಲಿ ಆರೋಪಿತನ ತಂದೆಯ ಹೆಸರನ್ನು ಬರೆದಿಲ್ಲ. ನಿಪಿ–3 ರಲ್ಲಿ ಕಾಣಿಸಿದ ವಿಳಾಸವನ್ನು ಆರೋಪಿತನೇ ನನಗೆ ಕೊಟ್ಟಿದ್ದನು. ಆರೋಪಿತನನ್ನು ಅವನು ವಿಳಾಸ ನೀಡಿದಾಗ ಅವನ ತಂದೆಯ ಹೆಸರನ್ನು ನಾನು ಕೇಳಿಲ್ಲ.

**5.** ಆರೋಪಿತನು 2016 ರ ನವೆಂಬರ್ ಅಥವಾ ಡಿಸೆಂಬರ್ ನಿಂದ ನನಗೆ ಪರಿಚಯವಾದನು. ಆರೋಪಿತನು ಬೆಂಗಳೂರಿನ ಕಂಟ್ರಿ ಕ್ಲಬ್ ನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದನು. ಆಗ ತಮ್ಮ ಕ್ಲಬ್ ನಲ್ಲಿ ಸದಸ್ಯನಾಗುವಂತೆ ನನ್ನನ್ನು ಪರಿಚಯಿಸಿಕೊಂಡನು. ಅಲ್ಲದೇ ಸದಸ್ಯನಾಗುವಂತೆ ನನಗೆ ಫೋನ್ ಮೂಲಕವು ಮಾತನಾಡಿ ಡಾಕ್ಟರ್ ಉಲ್ಲಾಸ್ ರವರು ಕಂಟ್ರಿ ಕ್ಲಬ್ ಗೆ ಸದಸ್ಯನಾಗುವಂತೆ ರೆಕ್ಮೆಂಡ್ ಮಾಡಿದನು.

**6.** ಆರೋಪಿತನು ಮೂಲತಃ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿಯವನು ಎಂದು ನನ್ನ ಮತ್ತು ಸುರೇಶರವರ ಎದುರಿನಲ್ಲಿ ಹೇಳಿದ್ದನು. 2017 ರಲ್ಲಿ ಆರೋಪಿತನಿಗೆ ಸುಮಾರು 30–36 ವರ್ಷ ಇದ್ದಿರಬಹುದು. ನನ್ನ ಪ್ರಕಾರ ನಾನು ನೋಡಿದಂತೆ 2017 ರಲ್ಲಿ ಆರೋಪಿತನಿಗೆ 30 ವರ್ಷಕ್ಕಿಂತ ಕಡಿಮೆ ವಯಸ್ಸು ಆಗಿರಲಿಲ್ಲ. 2017 ರಲ್ಲಿ ಆರೋಪಿತನ ಮನೆಯ ಪರಿಸ್ಥಿತಿ ಹೇಗಿತ್ತು ಎಂದು ನಾನು ವಿಚಾರಣೆ ಮಾಡಿಲ್ಲ. ಆರೋಪಿತನಿಗೆ ಒಡ ಹುಟ್ಟಿದವರು ಅಥವಾ ತಂದೆ ತಾಯಿ ಇದ್ದಾರೋ ಅಥವಾ ಇಲ್ಲವೋ ಮತ್ತು ಅವರ ಕುಟುಂಬಕ್ಕೆ ಆಸ್ತಿಗಳು ಇವೆಯೇ ಇಲ್ಲವೋ ಎಂದು ನಾನು ವಿಚಾರ ಮಾಡಿಲ್ಲ. ಆರೋಪಿತನು ಕಂಟ್ರಿ ಕ್ಲಬ್ ನ ಮ್ಯಾನೇಜರ್ ಎನ್ನುವ ಬಗ್ಗೆ ದಾಖಲೆಗಳನ್ನು ಪರಿಶೀಲನೆ ಮಾಡಿಲ್ಲ.

**7.** ನಾನು ಬಡ್ಡಿ ವ್ಯವಹಾರ ಮಾಡುತ್ತಿಲ್ಲ. 2016 ರ ನವೆಂಬರ್ ನಿಂದ 2017 ಅಕ್ಟೋಬರ್ ನ ವರೆಗೆ ಎರಡು ಬಾರಿ ಆರೋಪಿತನೊಂದಿಗೆ ನಾನು ಹಣದ ವ್ಯವಹಾರ ಮಾಡಿದ್ದೇನೆ. ವ್ಯವಹಾರ ಮಾಡಿದ ನಿಖರವಾದ ದಿನಾಂಕ ನನಗೆ ನೆನಪಿಲ್ಲ. ಆದರೆ 2017 ರ ಜನವರಿ ಮತ್ತು ಫೆಬ್ರವರಿ ತಿಂಗಳಿನಲ್ಲಿ ಮಾಡಿರಬಹುದು. ಅಕ್ಟೋಬರ್ 2017 ರ ಮೊದಲು ಆರೋಪಿತನ ಮೊಬೈಲ್ ನಂಬರ್ 9742633429 ಆಗಿತ್ತು. ಈ ಪ್ರಕರಣವನ್ನು ದಾಖಲಿಸಿದ ನಂತರ ಆರೋಪಿತನನ್ನು ನಾನು ಫೋನ್ ನಲ್ಲಿ ಮಾತನಾಡಿಲ್ಲ. ದೂರಿನ 2 ನೇ ಕಂಡಿಕೆಯಲ್ಲಿ ಹೇಳಿದ ಸುರೇಶ್ ಇವನು ಬೆಂಗಳೂರಿನಲ್ಲಿ

ವಾಸಿಸುತ್ತಿದ್ದಾನೆ. ಅವನು ನನ್ನ ಸ್ನೇಹಿತ. ಮೂಲತಃ ಸುರೇಶ್ ರವರು ಬಾಗೇಪಲ್ಲಿಯವರು ಇರಬಹುದು. ಆರೋಪಿತನು ಮತ್ತು ನನ್ನ ಸ್ನೇಹಿತ ಸುರೇಶ್ ಇವನು ಕಂಟ್ರಿ ಕ್ಲಬ್ ನಲ್ಲಿ ಸದಸ್ಯತ್ವವನ್ನು ಪಡೆಯುವ ವಿಚಾರವಾಗಿ ಪರಸ್ಪರ ಪರಿಚಯವಾಗಿರುತ್ತಾರೆ.

**8.** 2017 ರಲ್ಲಿ ಸಾಗರದ ಗ್ರಾಮೀಣ ಬ್ಯಾಂಕ್, ಹೆಚ್ ಡಿ ಎಫ್ ಸಿ ಬ್ಯಾಂಕ್, ಎಸ್ ಬಿ ಐ , ಕಾರ್ಪೊರೇಶನ್ ಬ್ಯಾಂಕುಗಳಲ್ಲಿ ನನ್ನ ಖಾತೆ ಇತ್ತು. ಮೇಲಿನ ಬ್ಯಾಂಕುಗಳನ್ನು ಹೊರತು ಪಡಿಸಿ ನಾನು ಈವರೆಗೆ ಬೇರೆ ಬ್ಯಾಂಕುಗಳಲ್ಲಿ ಖಾತೆ ಹೊಂದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.